ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/54/ಸುತ್ತೋಲೆ/2021-22/ತವಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:14-09-2021.

# ಸುತ್ತೋಲೆ

ವಿಷಯ: ಶಾಸನ ಸಮಿತಿಗಳಿಗೆ ಸಲ್ಲಿಸುವ ಇಲಾಖಾ ಟಿಪ್ಪಣಿಗಳಲ್ಲಿ ಉತ್ತರವನ್ನು ನೀಡುವಾಗ ಸ್ಪಷ್ಟ ಮತ್ತು ಸಮಂಜಸವಾದ ಉತ್ತರವನ್ನು ಒದಗಿಸುವಂತೆ ಸೂಚಿಸಿರುವ ಬಗ್ಗೆ.

ಉಲ್ಲೇಖ : ಸರ್ಕಾರದ ಪತ್ರ ಸಂಖ್ಯೆ: ಇಡಿ 89 ವಿವಿಧ 2021 ದಿನಾಂಕ :01.09.2021

****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಜ್ಯದ ಶಾಸನ ಸಮಿತಿಗಳಿಗೆ ಸಲ್ಲಿಸುವ ಇಲಾಖಾ ಟಿಪ್ಪಣಿಗಳಲ್ಲಿ ಬೇಜವಾಬ್ದಾರಿಯುತ ವಾಕ್ಯಗಳನ್ನು ಬಳಸುತ್ತಿದ್ದು, ಶಾಸನಸಭೆಯಿಂದ ರಚನೆಗೊಂಡಿರುವ ಸಮಿತಿಗಳು ಸದನದಷ್ಟೇ ಮಹತ್ವವನ್ನು ಹೊಂದಿರುವುದರಿಂದ ಅಂತಹ ಸಮಿತಿಗಳಿಗೆ ಉತ್ತರವನ್ನು ಸಲ್ಲಿಸುವಾಗ ಬಳಸುವ ಪದ ಪ್ರಯೋಗವು ಜವಾಬ್ದಾರಿಯುತವಾಗಿ ಇರಬೇಕಾಗುತ್ತದೆಯೆಂದು ಸರ್ಕಾರವು ಉಲ್ಲೇಖಿತ ದಿನಾಂಕ 01.09.2021 ರ ಪತ್ರದಲ್ಲಿ (ಪ್ರತಿಯನ್ನು ಲಗತ್ತಿಸಿದೆ) ಸೂಚಿಸಿರುತ್ತದೆ.

ಆದ್ದರಿಂದ ಮುಂದಿನ ದಿನಗಳಲ್ಲಿ ಶಾಸನ ಸಮಿತಿಗಳಿಗೆ ಉತ್ತರವನ್ನು ಸಲ್ಲಿಸುವಾಗ ಜವಾಬ್ದಾರಿಯುತವಾಗಿ ಭಾಷೆ/ವಾಕ್ಯ/ಪದ ಪ್ರಯೋಗ ಮಾಡಲು ಎಚ್ಚರಿಕೆ ವಹಿಸುವಂತೆ ಈ ಮೂಲಕ ಕಛೇರಿಯ ಎಲ್ಲ್ಲಾ ವಿಭಾಗಗಳ ಅಧಿಕಾರಿ ಸಿಬ್ಬಂದಿಗಳಿಗೆ ಸೂಚಿಸಲಾಗಿದೆ.

15/9/21

ಮುಖ್ಯ ಆಡಳಿತಾಧಿಕಾರಿಗಳು
ಕಾಲೇಜು ಶಿಕ್ಷಣ ಇಲಾಖೆ

ಇವರಿಗೆ

1. ಕೇಂದ್ರ ಕಛೇರಿಯ ಎಲ್ಲ್ಲಾ ವಿಭಾಗಗಳ ಅಧಿಕಾರಿ / ಸಿಬ್ಬಂದಿಗಳಿಗೆ

ಪ್ರತಿಯನ್ನು:

1. ಎಲ್ಲಾ ಪ್ರಾದೇಶಿಕ ಕಛೇರಿಗಳ ಜಂಟಿನಿರ್ದೇಶಕರಿಗೆ –ಮಾಹಿತಿಗಾಗಿ
2. ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಬೆಂಗಳೂರು–ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ಕಛೇರಿ ಪ್ರತಿ.

ಕನಾತಿ 2987581
07/09/2021

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 89 ವಿವಿಧ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:1/9/2021.

**ಇವರಿಂದ,**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಶಿಕ್ಷಣ ಇಲಾಖೆ, (ಉನ್ನತ ಶಿಕ್ಷಣ)
ಬೆಂಗಳೂರು.

**ಇವರಿಗೆ,**
1) ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ, ಬೆಂಗಳೂರು.
2) ಕುಲಸಚಿವರು, ಎಲ್ಲಾ ವಿಶ್ವವಿದ್ಯಾಲಯಗಳು.
3) ಎನ್.ಸಿ.ಸಿ ನಿರ್ದೇಶನಾಲಯ, ಬೆಂಗಳೂರು.

**ಮಾನ್ಯರೇ,**

**ವಿಷಯ:** ಶಾಸನ ಸಮಿತಿಗಳಿಗೆ ಸಲ್ಲಿಸುವ ಇಲಾಖಾ ಟಿಪ್ಪಣಿಗಳಲ್ಲಿ ಉತ್ತರವನ್ನು ನೀಡುವಾಗ ಸ್ಪಷ್ಟ ಮತ್ತು ಸಮಂಜಸವಾದ ಉತ್ತರವನ್ನು ಒದಗಿಸುವಂತೆ ಸೂಚಿಸಿರುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಪತ್ರ ಸಂಖ್ಯೆ:ಮುಕಾ/748/2021, ದಿನಾಂಕ:23-8-2021

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಪತ್ರದ ವಿಷಯವು ಸ್ವಯಂವೇದ್ಯವಾಗಿದ್ದು, ರಾಜ್ಯದ ಶಾಸನ ಸಮಿತಿಗಳಿಗೆ ಸಲ್ಲಿಸುವ ಇಲಾಖಾ ಟಿಪ್ಪಣಿಗಳಲ್ಲಿ ಹಲವು ಇಲಾಖೆಗಳು ಶಾಸನ ಸಮಿತಿಗಳಿಗೆ ಸಲ್ಲಿಸುವ ಇಲಾಖಾ ಟಿಪ್ಪಣಿಗಳಲ್ಲಿ ಬೇಜವಾಬ್ದಾರಿಯುತ ವಾಕ್ಯಗಳನ್ನು ಬಳಸುತ್ತಿದ್ದು, ಶಾಸನಸಭೆಯಿಂದ ರಚನೆಗೊಂಡಿರುವ ಸಮಿತಿಗಳು ಸದನದಷ್ಟೇ ಮಹತ್ವವನ್ನು ಹೊಂದಿರುವುದರಿಂದ ಅಂತಹ ಸಮಿತಿಗಳಿಗೆ ಉತ್ತರವನ್ನು ಸಲ್ಲಿಸುವಾಗ ಬಳಸುವ ಪದ ಪ್ರಯೋಗವು ಜವಾಬ್ದಾರಿಯುತವಾಗಿ ಇರಬೇಕಾಗುತ್ತದೆ ಎಂದು ತಿಳಿಸಲಾಗಿರುತ್ತದೆ.

ಆದ್ದರಿಂದ ಮುಂದಿನ ದಿನಗಳಲ್ಲಿ ಶಾಸನ ಸಮಿತಿಗಳಿಗೆ ಉತ್ತರವನ್ನು ಸಲ್ಲಿಸುವಾಗ ಜವಾಬ್ದಾರಿಯುತವಾಗಿ ಭಾಷೆ/ವಾಕ್ಯ/ಪದ ಪ್ರಯೋಗ ಮಾಡಲು ಸೂಕ್ತ ಕ್ರಮವಹಿಸಬೇಕೆಂದು ಈ ಮೂಲಕ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

**(ಮಹೇಶ್.ಆರ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿವಿ-2 ಮತ್ತು ಸಾಮಾನ್ಯ-2).

1/9/2021

File No. ED/89/VVD/2021-ED_SO_GEN2-EDUCATION HIGHER SEC (Computer No. 558095)
04(14)/2021/O/o CS-CS

ಪಿ. ರವಿ ಕುಮಾರ್, ಭಾ.ಆ.ಸೇ.,
ಮುಖ್ಯ ಕಾರ್ಯದರ್ಶಿ
P. RAVI KUMAR, I.A.S.,
Chief Secretary

ಕರ್ನಾಟಕ ಸರ್ಕಾರ
Government of Karnataka

ಸಂಖ್ಯೆ: ಮುಕಾ/748/2021

ದಿನಾಂಕ: 23-08-2021

## ಟಿಪ್ಪಣಿ

ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಸಚಿವಾಲಯ, ಇವರು ತಮ್ಮ ದಿನಾಂಕ: 19-08-2021 ರ ಅ.ಸ.ಪತ್ರ ಸಂಖ್ಯೆ: ಕವಿಸಸ/ಸಾಲೆಸ/ಮುಕಾ/01/2020-21 ರಲ್ಲಿ ಹಲವು ಇಲಾಖೆಗಳು ಶಾಸನ ಸಮಿತಿಗಳಿಗೆ ಸಲ್ಲಿಸುವ ಇಲಾಖಾ ಟಿಪ್ಪಣಿಗಳಲ್ಲಿ ಉತ್ತರವನ್ನು ನೀಡುವಾಗ ಬೇಜವಾಬ್ದಾರಿಯುತ ವಾಕ್ಯಗಳನ್ನು ಬಳಸಲಾಗಿರುವುದಾಗಿ ಹಾಗೂ ಶಾಸನಸಭೆಯಿಂದ ರಚನೆಗೊಂಡಿರುವ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ಸದನದಷ್ಟೇ ಮಹತ್ವವನ್ನು ಹೊಂದಿದ್ದು, ಅಂತಹ ಸಮಿತಿಗೆ ಉತ್ತರವನ್ನು ಸಲ್ಲಿಸುವಾಗ ಬಳಸುವ ಪದ ಪ್ರಯೋಗವು ಜವಾಬ್ದಾರಿಯುತವಾಗಿ ಇರಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಪತ್ರದಲ್ಲಿ ತಿಳಿಸಿರುವಂತೆ ಎಲ್ಲಾ ಇಲಾಖಾ ಮುಖ್ಯಸ್ಥರು ಸಮಿತಿ ಸಭೆಗಳಿಗೆ ಸಾಕ್ಷ್ಯವನ್ನು ಒದಗಿಸುವ ಸಂದರ್ಭದಲ್ಲಿ ವರದಿಯಲ್ಲಿನ ಆಕ್ಷೇಪಣೆಗಳಿಗೆ ಇಲಾಖೆಯು ಕೈಗೊಂಡ ಕ್ರಮಗಳ ಬಗ್ಗೆ ಪೂರ್ವಭಾವಿ ಸಭೆಯನ್ನು ನಡೆಸಿ, ಸ್ಪಷ್ಟ ಮತ್ತು ಸಮಂಜಸವಾದ ಉತ್ತರವನ್ನು ಒದಗಿಸುವಂತೆ ಸೂಚಿಸಿದೆ.

(ಪಿ. ರವಿ ಕುಮಾರ್)

ಇವರಿಗೆ,

ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.